KARC200016142023

Presented on : 08-06-2021
Registered on : 08-06-2021
Decided on : 09-04-2026
Duration: 04 yrs, 10 months, 01 days

<table>
<tr><td colspan="2">ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,<br>ದೇವದುರ್ಗ ನ್ಯಾಯಾಲಯ, ದೇವದುರ್ಗ.<br><br>ಉಪಸ್ಥಿತರು : ಶ್ರೀ.ಸುರೇಶ ಅಣ್ಣಪ್ಪ ಸವದಿ.<br>ಬಿ.ಎ,ಎಲ್.ಎಲ್,ಬಿ.,(ಸ್ಪೇಷಲ್).<br><br>ಇಂದು ದಿನಾಂಕ 9 ನೇ ಏಪ್ರೀಲ್ 2026<br><br>ಸಿ. ಸಿ. ನಂ.539 : 2023<br><br>(ಗುನ್ನೆ ನಂ.70/2020 – ಗಬ್ಬೂರು ಪೋಲಿಸ್ ಠಾಣೆ)</td></tr>
<tr><td>ಪಿರ್ಯಾದುದಾರರು :</td><td>ಕರ್ನಾಟಕ ಸರಕಾರ, ಗಬ್ಬೂರು ಪೋಲಿಸ್ ಠಾಣೆ,<br>ಗಬ್ಬೂರು.</td></tr>
<tr><td></td><td>(ಸಹಾಯಕ ಸರಕಾರಿ ಅಭಿಯೋಜಕರು)</td></tr>
<tr><td>ಆರೋಪಿತರು:</td><td>1. ಹನುಮಂತ ತಂದೆ ಹೊನ್ನಪ್ಪ,<br>ವಯಸ್ಸುಃ 37 ವರ್ಷ, ಉಃ ಕೂಲಿಕೆಲಸ,<br><br>2. ಬಸ್ಸಮ್ಮ ಗಂಡ ಹೊನ್ನಪ್ಪ,<br>ವಯಸ್ಸುಃ 62 ವರ್ಷ, ಉಃ ಕೂಲಿಕೆಲಸ,<br><br>3. ಶಾಂಭವಿ @ ಶಾಮಮ್ಮ ಗಂಡ ಹುಲಿಗೆಪ್ಪ,<br>ವಯಸ್ಸುಃ 38 ವರ್ಷ, ಉಃ ಕೂಲಿ ಕೆಲಸ,</td></tr>
</table>

| | |
|---|---|
| | 4. ನಾಗಮ್ಮ ತಂದೆ ದಂಡಪ್ಪ, ವಯಸ್ಸುಃ 39 ವರ್ಷ, ಉಃ ಕೂಲಿಕೆಲಸ, ಸಾಃ ಗಬ್ಬೂರು.<br><br>5. ಹುಲಿಗೆಪ್ಪ ತಂದೆ ನರಸಪ್ಪ, ವಯಸ್ಸುಃ 45 ವರ್ಷ, ಉಃ ಕೂಲಿಕೆಲಸ,<br><br>7. ನಿಜಗುಣ ತಂದೆ ಮಲ್ಲಪ್ಪ, ವಯಸ್ಸುಃ 19 ವರ್ಷ, ಉಃ ಕೂಲಿಕೆಲಸ<br><br>8. ಬಸವರಾಜ ತಂದೆ ಮಲ್ಲಪ್ಪ, ವಯಸ್ಸುಃ 18 ವರ್ಷ, ಉಃ ವಿದ್ಯಾರ್ಥಿ,<br><br>9. ಶಾಂತಪ್ಪ ತಂದೆ ಬಸ್ಸಪ್ಪ, ವಯಸ್ಸುಃ 38 ವರ್ಷ, ಉಃ ಕೂಲಿಕೆಲಸ<br><br>10. ಲಲಿತಾ @ ನಿರ್ಮಲಾ ಗಂಡ ಹನುಮಂತ, ವಯಸ್ಸುಃ 29 ವರ್ಷ, ಉಃ ಕೂಲಿಕೆಲಸ ಎಲ್ಲರೂ ಸಾಃ ಗಬ್ಬೂರು, ತಾಃ ದೇವದುರ್ಗ. |
| | (1 ರಿಂದ 5 & 7 ರಿಂದ 10 ಆರೋಪಿತರು ಶ್ರೀ.ಜೆ.ಹೆಚ್.ಬಿ.ವಕೀಲರು)<br>(6 ನೇ ಆರೋಪಿತರು ಜೆ.ಜೆ.ಬಿ) |

| | |
|---|---|
| ಗುನ್ಹೆ ನಡೆದ ದಿನಾಂಕ | 18.06.2020 |
| ಗುನ್ಹೆಯನ್ನು ವರದಿ ಮಾಡಿದ ದಿನಾಂಕ | 18.06.2020 |
| ಅಂತಿಮ ವರದಿ ಸಲ್ಲಿಸಿದ ದಿನಾಂಕ | 16.12.2020 |
| ದೋಷಾರೋಪಣೆ ಮಾಡಿದ ದಿನಾಂಕ | 12.10.2023 |
| ಸಾಕ್ಷಿ ವಿಚಾರಣೆ ಪ್ರಾರಂಭವಾದ ದಿನಾಂಕ | 20.06.2024 |

| | |
|---|---|
| ತೀರ್ಪನ್ನು ಕಾಯ್ದಿರಿಸಿದ ದಿನಾಂಕ | 26.03.2026 |
| ತೀರ್ಪಿನ ದಿನಾಂಕ | 09.04.2026 |
| ಶಿಕ್ಷೆಯ ಆದೇಶದ ದಿನಾಂಕ, ಯಾವುದಾದರೂ ಇದ್ದರೆ | – |

## ತೀರ್ಪು

ಪ್ರಸ್ತುತ ಮೊಕದ್ದಮೆಯನ್ನು ಆರಕ್ಷಕ ಉಪ ನೀರಿಕ್ಷಕರು, ಗಬ್ಬೂರು ಪೋಲಿಸ ಠಾಣೆ, ಗಬ್ಬೂರು ಇವರು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ.143, 147, 323, 354(ಬಿ), 504 ಮತ್ತು 506 ಸಹ ಕಲಂ.149 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳಿಗಾಗಿ ಸಲ್ಲಿಸಿದಂತಹ ದೋಷಾರೋಪಣಾ ಪತ್ರದ ಆಧಾರದ ಮೇರೆಗೆ ಈ ಪ್ರಕರಣವನ್ನು ನೊಂದಾಯಿಸಿಕೊಳ್ಳಲಾಗಿದೆ.

2. **ಅಭಿಯೋಜನೆಯವರ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಕಾಣಿಸಿದಂತಿದೆ:**

ಗಬ್ಬೂರು ಪೊಲೀಸ್ ಠಾಣಾ ಸರಹದ್ದು, ಗಬ್ಬೂರು ಗ್ರಾಮದಲ್ಲಿ ದಿನಾಂಕ 18.06.2020 ರಂದು ಬೆಳಿಗ್ಗೆ 07.30 ಗಂಟೆ ಸುಮಾರಿಗೆ ಸಾಕ್ಷಿ ನಂ–4 ರವರು ಕಸವನ್ನು ತಿಪ್ಪೆಗೆ ಹಾಕಿ ಬರುವಾಗ 2 ನೇ ಆರೋಪಿತರು ಸಾಕ್ಷಿ ನಂ–4 ರವರಿಗೆ ಮನೆಯ ಮುಂದೆ ಬರುತ್ತಿರುವಾಗ 2 ನೇ ಆರೋಪಿತಳು ಸಾಕ್ಷಿ–4 ರವರಿಗೆ ಅವಾಚ್ಯ ಶಬ್ದಗಳಾದ ಸೂಳೆ ಮಕ್ಕಳು ಮದುವೆ ಮುಂಜಿ ಇರಲಾರದೆ ಕುಂತಿದ್ದಾರೆ ಅಂತಾ ಬೈಯುತ್ತಿರುವಾಗ ಸಾಕ್ಷಿ–4 ರವರು ಯಾಕೆ ಈ ರೀತಿ ಬೈಯುತ್ತಿಯಾ ಅಂತಾ 2 ನೇ ಆರೋಪಿತಳಿಗೆ ಕೇಳಿದ್ದಕ್ಕೆ 1 ನೇ ಆರೋಪಿತನು ಮನೆಯಿಂದ ಹೊರಗೆ ಬಂದು ಸಾಕ್ಷಿ–4 ರವರಿಗೆ ಏ ಬೋಗಬಾಡಿ ನಿನ್ನ ಮಕ್ಕಳಿಗೆ ಬುದ್ಧಿ ಕಲಿಸು ನಮಗೆ ಏನು ಕೇಳುತ್ತೀ ಎಂದು ಗದರಿಸಿದಾಗ 3 ರಿಂದ 10 ನೇ ಆರೋಪಿತರು ಗುಂಪಾಗಿ ಬಂದು ಅವರೆಲ್ಲರೂ ಸಾಕ್ಷಿ–4 ರವರ ಜೊತೆ ಒರಟಾಗಿ ಮಾತಾನಾಡುತ್ತಿರುವಾಗ ಸಾಕ್ಷಿ–1 ರವರು ಓಡಿ ಅಲ್ಲಿಗೆ ಬಂದಿದ್ದು ಆರೋಪಿತರೆಲ್ಲರೂ ಗುಂಪಾಗಿ ನಿಂತಾಗ ಅದರಲ್ಲಿ 1 ನೇ ಆರೋಪಿತನು ಸಾಕ್ಷಿ–4 ರವರಿಗೆ ಎದೆಗೆ ಕೈಯಿಂದ

ನೂಕಿದಾಗ ಸಾಕ್ಷಿ-1 ರವರು ಸಾಕ್ಷಿ-4 ರವರನ್ನು ಹಿಡಿದುಕೊಂಡು, ದೊಡ್ಡವರಿಗೆ ಮರ್ಯಾದೆ ಕೊಡಿ ಎಂದು ಹೇಳಿದಕ್ಕೆ, 1 ನೇ ಆರೋಪಿತನು ನಿಂದೆ ಏನಲೇ ಸೂಳೆ ಎಂದು ಸಾಕ್ಷಿ-1 ರವರ ಸೆರಗನ್ನು ಹಿಡಿದು ಅಪಮಾನಗೊಳಿಸಿ ಆಕೆಯನ್ನು ನೂಕಿದಾಗ ಆಕೆಯು ಕೆಳಗಡೆ ಬಿದ್ದಾಗ 5 ನೇ ಆರೋಪಿತನು ಕಾಲಿನಿಂದ ಒದ್ದಿದ್ದು, ಆಗ ಉಳಿದ ಆರೋಪಿತರೆಲ್ಲರೂ ಸಾಕ್ಷಿ-1 ಮತ್ತು 4 ರವರಿಗೆ ಅವಾಚ್ಯವಾಗಿ ಬೈದಿದ್ದು, 3 ಮತ್ತು 7 ನೇ ಆರೋಪಿತರು ಕೂಡಿ ಕೈಯಿಂದ ಹೊಡೆದಿದ್ದು, ಸಾಕ್ಷಿ-1 ಮತ್ತು 4 ರವರು ಅಂಜಿಕೊಂಡು ಭಯದಿಂದ ಮನೆಗೆ ಬರುತ್ತಿದ್ದಾಗ 4, 8 ರಿಂದ 10 ನೇ ಆರೋಪಿತರು ಅವರಿಗೆ ಎಲ್ಲರೂ ಸೇರಿ ಇನ್ನೊಂದು ಸಲ ನಮ್ಮ ತಂಟೆಗೆ ಬಂದರೆ ಜೀವವನ್ನು ತೆಗೆಯುತ್ತೇವೆ ಅಂತಾ ಜೀವದ ಬೆದರಿಕೆ ಹಾಕಿದ್ದು ಅಲ್ಲದೆ 1 ನೇ ಆರೋಪಿತನು ನಾನು ಲೀಡರ್ ಇದ್ದೇನೆ ನನ್ನ ಹಿಂದೆ ಲೀಡರ್ ಇದ್ದಾರೆ ನೀನೇನು ಕಿತ್ತಿಕೊಳ್ಳುತ್ತಿ ಅಂತಾ ಸಾಕ್ಷಿ-1 ನೇದ್ದವರಿಗೆ ಬೈದಿರುತ್ತಾರೆಂದು ಪ್ರಕರಣ ದಾಖಲಾಗಿರುತ್ತದೆ. ಆದಕಾರಣ, ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ.143, 147, 323, 354(ಬಿ), 504 ಮತ್ತು 506 ಸಹ ಕಲಂ.149 ರಡಿಯಲ್ಲಿ ಅಪರಾಧವೆಸಗಿರುತ್ತಾರೆ.

3. ಘಟನೆಯ ಕುರಿತು ಚಾಸಾಃ1 ಇವರು ಗಬ್ಬೂರು ಆರಕ್ಷಕ ಠಾಣೆಗೆ ನೀಡಿದಂತಹ ದೂರಿನನ್ವಯ ಸದರಿ ಠಾಣೆಯ ಆರಕ್ಷಕ ಉಪ ನೀರಿಕ್ಷಕರು ಪ್ರಕರಣವನ್ನು ದಾಖಲಿಸಿಕೊಂಡು, ತನಿಖೆಯನ್ನು ಕೈಗೊಂಡು ತನಿಖೆ ಪೂರ್ಣಗೊಂಡ ನಂತರ ಆರೋಪಿತರ ವಿರುದ್ಧ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

4. ನ್ಯಾಯಾಲಯವು ದೋಷಾರೋಪಣಾ ಪಟ್ಟಿಯನ್ನು ಪರಿಶೀಲಿಸಿ ಮೇಲ್ಕಾಣಿಸಿದ ಅಪರಾಧಗಳಿಗೆ ಸಂಜ್ಞೆತೆಯನ್ನು ತೆಗೆದುಕೊಂಡು ಆರೋಪಿತರ ಹಾಜರಾತಿಯನ್ನು ಪಡೆದಿದ್ದು ಆರೋಪಿತರು ತಮ್ಮ ವಕೀಲರ ಮುಖಾಂತರ ಜಾಮೀನು ಅರ್ಜಿಯನ್ನು ಗುಜರಾಯಿಸಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ನಂತರ ಆರೋಪಿತರಿಗೆ ಅಭಿಯೋಗ ಪರ ದಾಖಲಾತಿಗಳನ್ನು ದಂಡ ಪ್ರಕ್ರಿಯಾ ಸಂಹಿತೆಯ ಕಲಂ.207 ರನ್ವಯ ಒದಗಿಸಲಾಗಿದೆ. ನಂತರ ಆರೋಪಿತರಿಗೆ ಆರೋಪಣೆಯನ್ನು ರಚಿಸಿ ಓದಿ ಹೇಳಲಾಗಿದ್ದು ಸದರಿ ಆರೋಪಿತರು

ತಾವು ಯಾವುದೇ ತಪ್ಪು ಮಾಡಿರುವುದಿಲ್ಲವೆಂದು ಉತ್ತರಿಸಿ ವಿಚಾರಣೆಯಾಗಬೇಕೆಂದು ಹಕ್ಕು ಸಾಧನೆ ಮಾಡಿರುತ್ತಾರೆ.

5. ಆರೋಪಿತರು ದೋಷಾರೋಪಣಾ ಪಟ್ಟಿಯಲ್ಲಿ ಕಾಣಿಸಿರುವಂತಹ ಅಪರಾಧಗಳನ್ನು ಮಾಡಿರುತ್ತಾರೆಂದು ಸಾಬೀತು ಪಡಿಸಲು ಅಭಿಯೋಜನೆಯು ಒಟ್ಟು ಐದು ಸಾಕ್ಷಿದಾರರನ್ನು ಫ್ರಾಸಾಃ1 ರಿಂದ 5 ಎಂದು ವಿಚಾರಣೆಗೆ ಒಳಪಡಿಸಿಕೊಂಡು, ಮೂರು ದಾಖಲೆಗಳನ್ನು ನಿಪಿ-1 ರಿಂದ 3 ಎಂದು ಗುರುತಿಸಿಕೊಂಡಿದೆ. ಅಭಿಯೋಜನೆಯ ಪರ ಸಾಕ್ಷಿ ವಿಚಾರಣೆ ಮುಗಿದ ನಂತರ, ಆರೋಪಿತರ ಹೇಳಿಕೆಯನ್ನು ದಂಡ ಪ್ರಕ್ರಿಯಾ ಸಂಹಿತೆ 313 ರಡಿಯಲ್ಲಿ ದಾಖಲಿಸಿಕೊಂಡಿದ್ದು, ಆರೋಪಿತರು ಅಭಿಯೋಜನೆಯ ಪರ ಸಾಕ್ಷ್ಯವನ್ನು ಅಲ್ಲಗಳೆದಿದ್ದು, ತಮ್ಮ ಪರವಾಗಿ ಯಾವುದೇ ಮೌಖಿಕ ಮತ್ತು ದಾಸ್ತವೇಜು ಸಾಕ್ಷ್ಯವಿರುವುದಿಲ್ಲವೆಂದು ಹೇಳಿರುತ್ತಾರೆ.

6. ಅಭಿಯೋಗ ಪರ ಮತ್ತು ಆರೋಪಿತರ ಪರ ವಕೀಲರ ವಾದ-ಪ್ರತಿವಾದವನ್ನು ಆಲಿಸಿ ಕಡತಗಳನ್ನು ಪರಿಶೀಲನೆ ಮಾಡಲಾಯಿತು.

7. ಆರೋಪಿತರ ಮೇಲಿನ ಆರೋಪಣೆಯನ್ನು ನಿಸ್ಸಂದೇಹವಾಗಿ ರುಜುವಾತುಪಡಿಸುವುದು, ಅಭಿಯೋಗ ಮೊಕದ್ದಮೆ ಆದ್ಯ ಕರ್ತವ್ಯ. ಕಾರಣ ಈ ಕೆಳಕಂಡ ಅಂಶಗಳು ಈ ನ್ಯಾಯಾಲಯದ ತೀರ್ಮಾನಕ್ಕೆ ಉದ್ಭವಿಸಿರುತ್ತವೆಃ

1. ಅಭಿಯೋಜನೆಯು ಗಬ್ಬೂರು ಪೊಲೀಸ್ ಠಾಣಾ ಸರಹದ್ದು, ಗಬ್ಬೂರು ಗ್ರಾಮದಲ್ಲಿ ದಿನಾಂಕ 18.06.2020 ರಂದು ಬೆಳಿಗ್ಗೆ 07.30 ಗಂಟೆ ಸುಮಾರಿಗೆ ಸಾಕ್ಷಿ ನಂ-4 ರವರು ಕಸವನ್ನು ತಿಪ್ಪೆಗೆ ಹಾಕಿ ಬರುವಾಗ 2 ನೇ ಆರೋಪಿತರು ಸಾಕ್ಷಿ ನಂ-4 ರವರಿಗೆ ಮನೆಯ ಮುಂದೆ ಬರುತ್ತಿರುವಾಗ 2 ನೇ ಆರೋಪಿತಳು ಸಾಕ್ಷಿ-4 ರವರಿಗೆ ಅವಾಚ್ಯ ಶಬ್ದಗಳಾದ ಸೂಳೆ ಮಕ್ಕಳು ಮದುವೆ ಮುಂಜೆ

ಇರಲಾರದೆ ಕುಂತಿದ್ದಾರೆ ಅಂತಾ ಬೈಯುತ್ತಿರುವಾಗ ಸಾಕ್ಷಿ-4 ರವರು ಯಾಕೆ ಈ ರೀತಿ ಬೈಯುತ್ತಿಯಾ ಅಂತಾ 2 ನೇ ಆರೋಪಿತಳಿಗೆ ಕೇಳಿದ್ದಕ್ಕೆ 1 ನೇ ಆರೋಪಿತನು ಮನೆಯಿಂದ ಹೊರಗೆ ಬಂದು ಸಾಕ್ಷಿ-4 ರವರಿಗೆ ಏ ಬೋಗಬಾಡಿ ನಿನ್ನ ಮಕ್ಕಳಿಗೆ ಬುದ್ಧಿ ಕಲಿಸು ನಮಗೆ ಏನು ಕೇಳುತ್ತೀ ಎಂದು ಗದರಿಸಿದಾಗ 3 ರಿಂದ 10 ನೇ ಆರೋಪಿತರು ಗುಂಪಾಗಿ ಬಂದು ಅವರೆಲ್ಲರೂ ಸಾಕ್ಷಿ-4 ರವರ ಜೊತೆ ಒರಟಾಗಿ ಮಾತಾನಾಡುತ್ತಿರುವಾಗ ಸಾಕ್ಷಿ-1 ರವರು ಓಡಿ ಅಲ್ಲಿಗೆ ಬಂದಿದ್ದು ಆರೋಪಿತರೆಲ್ಲರೂ ಗುಂಪಾಗಿ ನಿಂತಾಗ ಅದರಲ್ಲಿ 1 ನೇ ಆರೋಪಿತನು ಸಾಕ್ಷಿ-4 ರವರಿಗೆ ಎದೆಗೆ ಕೈಯಿಂದ ನೂಕಿದಾಗ ಸಾಕ್ಷಿ-1 ರವರು ಸಾಕ್ಷಿ-4 ರವರನ್ನು ಹಿಡಿದುಕೊಂಡು, ದೊಡ್ಡವರಿಗೆ ಮರ್ಯಾದೆ ಕೊಡಿ ಎಂದು ಹೇಳಿದಕ್ಕೆ, 1 ನೇ ಆರೋಪಿತನು ನಿಂದೆ ಏನಲೇ ಸೂಳೆ ಎಂದು ಸಾಕ್ಷಿ-1 ರವರ ಸೆರಗನ್ನು ಹಿಡಿದು ಅಪಮಾನಗೊಳಿಸಿ ಆಕೆಯನ್ನು ನೂಕಿದಾಗ ಆಕೆಯು ಕೆಳಗಡೆ ಬಿದ್ದಾಗ 5 ನೇ ಆರೋಪಿತನು ಕಾಲಿನಿಂದ ಒದ್ದಿದ್ದು, ಆಗ ಉಳಿದ ಆರೋಪಿತರೆಲ್ಲರೂ ಸಾಕ್ಷಿ-1 ಮತ್ತು 4 ರವರಿಗೆ ಅವಾಚ್ಯವಾಗಿ ಬೈದಿದ್ದು, 3 ಮತ್ತು 7 ನೇ ಆರೋಪಿತರು ಕೂಡಿ ಕೈಯಿಂದ ಹೊಡೆದಿದ್ದು, ಸಾಕ್ಷಿ-1 ಮತ್ತು 4 ರವರು ಅಂಜಿಕೊಂಡು ಭಯದಿಂದ ಮನೆಗೆ ಬರುತ್ತಿದ್ದಾಗ 4, 8 ರಿಂದ 10 ನೇ ಆರೋಪಿತರು ಅವರಿಗೆ ಎಲ್ಲರೂ ಸೇರಿ ಇನ್ನೊಂದು ಸಲ ನಮ್ಮ ತಂಟೆಗೆ ಬಂದರೆ ಜೀವವನ್ನು ತೆಗೆಯುತ್ತೇವೆ ಅಂತಾ ಜೀವದ ಬೆದರಿಕೆ ಹಾಕಿದ್ದು ಅಲ್ಲದೆ 1 ನೇ ಆರೋಪಿತನು ನಾನು ಲೀಡರ್ ಇದ್ದೇನೆ ನನ್ನ ಹಿಂದೆ ಲೀಡರ್ ಇದ್ದಾರೆ ನೀನೇನು ಕಿತ್ತಿಕೊಳ್ಳುತ್ತಿ ಅಂತಾ ಸಾಕ್ಷಿ-1 ನೇದ್ದವರಿಗೆ ಬೈದು ಆ ಮೂಲಕ ಭಾರತೀಯ ದಂಡ

ಸಂಹಿತೆ ಕಲಂ.143, 147, 323, 354(ಬಿ), 504 ಮತ್ತು 506 ಸಹ ಕಲಂ.149 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಎಸೆಗಿರುತ್ತಾರೆಂದು ಅಭಿಯೋಜನೆಯವರು ಸಂಶಾಯಾತೀತವಾಗಿ ರುಜುವಾತು ಪಡಿಸಿರುತ್ತಾರೆಯೆ?

2. ಯಾವ ಆದೇಶ?

8. ಈ ಮೇಲಿನ ಅಂಶಗಳನ್ನು ಈ ಕೆಳಕಂಡಂತೆ ಉತ್ತರಿಸಲಾಗಿದೆ:-

ಅಂಶ 1 ನ್ನು :- ನಕಾರಾತ್ಮಕವಾಗಿ

ಅಂಶ 2 ನ್ನು :- ಈ ಕೆಳಕಂಡ ಕಾರಣಗಳಿಗಾಗಿ ಅಂತಿಮ ಆದೇಶದಂತೆ:-

## ಕಾರಣಗಳು

9. **ಅಂಶ 1 ನ್ನು** :- ಚಾಸಾ-5/ಫ್ರಾಸಾ-1/ ಸಾಧಿಕ್ ಪಾಷ ತಂದೆ ಶೇಖ್ ಮಹೆಬೂಬಸಾಬ, ಸದರಿಯವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 18-06-2020 ರಂದು ರಾತ್ರಿ 8-00 ಗಂಟೆಗೆ ನಾನು ಠಾಣಾ ಕರ್ತವ್ಯದಲ್ಲಿದ್ದಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ಲಿಖಿತ ದೂರನ್ನು ಸಲ್ಲಿಸಿರುತ್ತಾರೆ. ಅದರ ಆಧಾರದ ಮೇರೆಗೆ ನಾನು ಠಾಣಾ ಗುನ್ನೆ ನಂ.70/2020 ನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ. ದಿನಾಂಕ 19-06-2020 ರಂದು ಬೆಳಿಗ್ಗೆ 9-00 ಗಂಟೆಗೆ ಗುನ್ನೆ ಸ್ಥಳಕ್ಕೆ ಭೇಟಿ ನೀಡಿ ಚಾಸಾ-1 ರವರು ತೋರಿಸಿದ ಜಾಗದ ಪಂಚನಾಮೆಯನ್ನು ಬೆಳಿಗ್ಗೆ 9-00 ರಿಂದ 10-00 ಗಂಟೆಯವರೆಗೆ ಮಾಡಿರುತ್ತೇನೆ ಮತ್ತು ಚಾಸಾ-4 ರವರ ಹೇಳಿಕೆ ಪಡೆದಿರುತ್ತೇನೆ. ಸಾಕ್ಷಿಯು ದೂರು, ಪ್ರಥಮ ವರ್ತಮಾನ ವರದಿ ಮತ್ತು ಪಂಚನಾಮೆಯನ್ನು ಗುರುತಿಸಿಕೊಂಡು ಸಾಕ್ಷಿ ನುಡಿದಿರುತ್ತಾರೆ.

10. ಸದರಿ ಸಾಕ್ಷಿಯನ್ನು ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದಾಗ, ಚಾಸಾ-1 ರವರ ಜೊತೆ ದೂರನ್ನು ದಾಖಲು ಮಾಡಲು 3-4 ಜನ ಬಂದಿದ್ದರು. ದೂರನ್ನು

ಕೈಯಿಂದ ಬರೆದುಕೊಂಡು ಬಂದಿದ್ದರು. ಗುನ್ನೆ ಸ್ಥಳ ನಮ್ಮ ಠಾಣೆಯಿಂದ 2 ಕಿ.ಮೀ ಅಂತರದಲ್ಲಿ ಇರುತ್ತದೆ. ನಾವು ಸ್ಥಳಕ್ಕೆ ಹೋದಾಗ ಮೊದಲೇ ಪಂಚರು ಸ್ಥಳದಲ್ಲಿ ಇದ್ದರು. ಚಾಸಾ-1 ರವರ ಮೇಲೆ ಆರೋಪಿತರು ಕಲಂ.307 ಭಾ.ದಂ.ಸ ಅಡಿಯಲ್ಲಿ ದೂರನ್ನು ದಾಖಲಿಸಿರುತ್ತಾರೆ ಎಂದರೆ ಗೊತ್ತಿಲ್ಲ ಎಂಬುವುದಾಗಿ ನುಡಿದಿರುತ್ತಾರೆ.

11. ಚಾಸಾ-1/ಫ್ರಾಸಾ-2/ ಸೂಗಮ್ಮ ಗಂಡ ಮಲ್ಲಯ್ಯ, ಇವರು ತಮ್ಮ ಸಾಕ್ಷ್ಯದಲ್ಲಿ, ಚಾಸಾ-4 ನನ್ನ ಅತ್ತೆ, ಚಾಸಾ-2 ಮತ್ತು 3 ಸಂಬಂಧಿಕರು. ಆರೋಪಿತರು ಗೊತ್ತು. ಕಳೆದ 4 ವರ್ಷಗಳ ಹಿಂದೆ ಬೆಳಿಗ್ಗೆ 7.30 ಗಂಟೆಗೆ ಚಾಸಾ-4 ನನ್ನ ಅತ್ತೆ ಲಕ್ಷ್ಮಿ ಸಮೀಪದಲ್ಲಿ ಇರುವ ತಿಪ್ಪೆಯಲ್ಲಿ ಕಸ ಹಾಕಿ ಬರುತ್ತಿದ್ದಾಗ 2 ನೇ ಆರೋಪಿ ಬಸ್ಸಮ್ಮ ನನ್ನ ಅತ್ತೆಗೆ ಚಿನಾಲಿ ಇತ್ಯಾದಿಯಾಗಿ ಅವಾಚ್ಯವಾಗಿ ಬೈಯತ್ತಿದ್ದಾಗ ನಾನು ಏಕೆ ಬೈಯುತ್ತಿ ಎಂದು ಕೇಳಿದಾಗ ನಿಮ್ಮ ಮನೆಯಲ್ಲಿ ಯಾರು ಓದಿದವರು ಇರುವುದಿಲ್ಲ ನಿಮಗೆ ಕಾನೂನು ಗೊತ್ತಿರುವುದಿಲ್ಲ ಎಂದು ಹೇಳಿರುತ್ತಾರೆ. ನಂತರ ಗಬ್ಬೂರು ಠಾಣೆಗೆ ಅದೇ ದಿನ ರಾತ್ರಿ 8 ಗಂಟೆಗೆ ಹೋಗಿ ನಾನು ದೂರನ್ನು ನೀಡಿರುತ್ತೇನೆ. ನಾವು ಮನೆಯಲ್ಲಿ ಇಲ್ಲದೇ ಇದ್ದಾಗ ಪೋಲಿಸರು ನಮ್ಮ ಮನೆಗೆ ಬಂದು ಹೋಗಿರುತ್ತಾರೆ. ಇಷ್ಟನ್ನು ಹೊರತು ಪಡಿಸಿ ಬೇರೆನು ಗೊತ್ತಿರುವುದಿಲ್ಲ ಎಂಬುದಾಗಿ ನುಡಿದಿರುತ್ತಾರೆ. ಆಗ ಅಭಿಯೋಜನೆಯ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪಾಟೀ ಸವಾಲಿಗೆ ಒಳಪಡಿಸಿದಾಗ ಪಾಟೀ ಸವಾಲಿನಲ್ಲಿ ಅಭಿಯೋಜನೆಗೆ ವ್ಯತಿರಿಕ್ತ ಸಾಕ್ಷ್ಯ ನುಡಿದಿರುತ್ತಾರೆ. ಸದರಿ ಪಾಟೀಸವಾಲಿನಲ್ಲಿ ಅಭಿಯೋಜನೆಯು ತನ್ನ ಪ್ರಕರಣಕ್ಕೆ ಪೂರಕವಾಗುವಂತಹ ಯಾವುದೇ ಸಂಗತಿಗಳನ್ನು ಸಾಕ್ಷಿಯಿಂದ ಹೊರತರುವಲ್ಲಿ ವಿಫಲವಾಗಿರುತ್ತದೆ.

12. ಚಾಸಾ-4/ಫ್ರಾಸಾ-3/ ಲಕ್ಷ್ಮೀ ಗಂಡ ಶರಣಪ್ಪ, ಇವರು ತಮ್ಮ ಸಾಕ್ಷ್ಯದಲ್ಲಿ, ಚಾಸಾ-1 ನನ್ನ ಸೂಸೆ, ಚಾಸಾ-2 ಮತ್ತು 3 ಸಂಬಂಧಿಕರು. ಆರೋಪಿತರು ಗೊತ್ತು. ಕಳೆದ 4 ವರ್ಷಗಳ ಹಿಂದೆ ಬೆಳಿಗ್ಗೆ 7.30 ಗಂಟೆಗೆ ನಾನು ಸಮೀಪದಲ್ಲಿ ಇರುವ ತಿಪ್ಪೆಯಲ್ಲಿ ಕಸ ಹಾಕಲು ಹೋದಾಗ 2 ನೇ ಆರೋಪಿ ಬಸ್ಸಮ್ಮ ನನಗೆ ಚಿನಾಲಿ ಇತ್ಯಾದಿಯಾಗಿ ಅವಾಚ್ಯವಾಗಿ ಬೈಯತ್ತಿದ್ದಾಗ ನಾನು ಏಕೆ ಬೈಯುತ್ತಿ ಎಂದು ಕೇಳಿದಾಗ 1 ನೇ ಆರೋಪಿ ಮನೆಯಿಂದ ಬಂದು ನನ್ನ ಕೂದಲು

ಹಿಡಿದು ಎಳೆದಾಡಿ ಸೆರಗು ಹಿಡಿದು ಎಳೆದಾಡಿ ನನ್ನ ಎದೆಗೆ ಕಾಲಿನಿಂದ ಒದ್ದು, ಆಗ ನನ್ನ ಸೊಸೆ ಚಾಸಾ−1 ನನ್ನ ಅತ್ತೆಗೆ ಯಾಕೆ ಹೊಡೆಯುತ್ತೀರಿ ಎಂದು ಕೇಳಿದಾಗ ಮನೆಯವರು ಎಲ್ಲರೂ ಚಿಕ್ಕವರನ್ನು ಹಿಡಿದುಕೊಂಡು ಬಂದು ನನಗೆ ಮತ್ತು ಚಾಸಾ−1 ರವರಿಗೆ ಕೈಗಳಿಂದ ಹೊಡೆದಿರುತ್ತಾರೆ. ಈ ಬಾರಿ ಬಿಟ್ಟಿರುತ್ತೇವೆ ಇನ್ನೊಮ್ಮೆ ಬಿಡುವುದಿಲ್ಲ ಎಂದು ಜೀವದ ಬೆದರಿಕೆ ಹಾಕಿರುತ್ತಾರೆ. ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ. ನನ್ನ ಸೊಸೆ ದೂರನ್ನು ನೀಡಿರುತ್ತಾಳೆ ಎಂದು ಸಾಕ್ಷಿ ನುಡಿದಿರುತ್ತಾರೆ.

13. ಸದರಿ ಸಾಕ್ಷಿಯನ್ನು ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದಾಗ, ಘಟನೆ ನಡೆದ ದಿನಾಂಕ ತಿಂಗಳು ಹೇಳಲು ಬರುವುದಿಲ್ಲ. ಜಗಳ ರಾತ್ರಿ 8 ಗಂಟೆಗೆ ಆಗಿರುತ್ತದೆ ಆಗ ಕತ್ತಲು ಇತ್ತು. ಆರೋಪಿತರ ಮನೆ ಮುಂದೆ ಲೈಟಿನ ಬೆಳಕು ಇರುತ್ತದೆ. ನನ್ನ ಮನೆ ಮುಂದೆ ಬೆಳಕು ಇರುವುದಿಲ್ಲ. ಆರೋಪಿತರು ಅವರ ಮನೆ ಮುಂದೆ ನನಗೆ ಹೊಡೆದಿರುತ್ತಾರೆ. ಪೋಲಿಸರು ಹೇಳಿಕೆಯಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಘಟನ ಸ್ಥಳದ ಪೂರ್ವಕ್ಕೆ ಚರಂಡಿ, ಪಶ್ಚಿಮಕ್ಕೆ ನೀರಿನ ಟಾಂಕಿ, ಉತ್ತರಕ್ಕೆ ಕಂದಕ ಮತ್ತು ದಕ್ಷಿಣಕ್ಕೆ ಗೊಗಪ್ಪ ಮನೆ ಇರುತ್ತದೆ. ಚಾಸಾ−1 ರವರು ದೂರು ಕೊಡಲು ಹೋದಾಗ ನಾನು ಸಹ ಠಾಣೆಗೆ ಹೋಗಿದ್ದೆ. ಚಸಾ−1 ರವರು ದೂರನ್ನು ಹೇಳಿ ಬರೆಸಿರುತ್ತಾರೆ. ಪೋಲಿಸರು ದೂರನ್ನು ಬರೆದ ನಂತರ ಓದಿ ಹೇಳಿದ ಬಗ್ಗೆ ನನಗೆ ನೆನಪಿಲ್ಲ. ಆರೋಪಿತರು ನಮ್ಮ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲು ಮಾಡಿದ್ದರು ಎಂದರೆ ಸರಿ ಎಂಬುವುದಾಗಿ ನುಡಿದಿರುತ್ತಾರೆ.

14. ಚಾಸಾ−3/ಪ್ರಾಸಾ−4/ ಭೀಮಪ್ಪ ತಂದೆ ನಾಗಪ್ಪ, ಇವರು ತಮ್ಮ ಸಾಕ್ಷ್ಯದಲ್ಲಿ, ಈ ಪ್ರಕರಣದ ಬಗ್ಗೆ ನನಗೇನು ಗೊತ್ತಿಲ್ಲ. ಪೋಲಿಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ. ನಾನು ಹೆಬ್ಬೆಟ್ಟಿನ ಗುರುತು ಹಾಕುತ್ತೇನೆ. ಪಂಚನಾಮೆಯಲ್ಲಿ ಬರೆದ ಸಂಗತಿಗಳು ನನಗೆ ಗೊತ್ತಿಲ್ಲ ಎಂಬುದಾಗಿ ನುಡಿದಿರುತ್ತಾರೆ. ಅಭಿಯೋಜನೆಯು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ನ್ಯಾಯಾಲಯದ ಅನುಮತಿ ಪಡೆದು ಪಾಟೀಸವಾಲನ್ನು ಮಾಡಿದ್ದು, ಸದರಿ ಪಾಟೀಸವಾಲಿನಲ್ಲಿ ಅಭಿಯೋಜನೆಯು ತನ್ನ ಪ್ರಕರಣಕ್ಕೆ

ಪೂರಕವಾಗುವಂತಹ ಯಾವುದೇ ಸಂಗತಿಗಳನ್ನು ಸಾಕ್ಷಿಯಿಂದ ಹೊರತರುವಲ್ಲಿ ವಿಫಲವಾಗಿರುತ್ತದೆ.

15. ಚಾಸಾ-6/ ಫ್ರಾಸಾ-5 ಎಮ್.ಈರಣ್ಣ ತಂದೆ ಮಾರೆಪ್ಪ ಇವರು ತಮ್ಮ ಸಾಕ್ಷಿಯಲ್ಲಿ ದಿನಾಂಕ 20.06.2020 ರಂದು ಚಾಸಾ-5 ರವರಿಂದ ಕಡತವನ್ನು ಪಡೆದು ಪರಿಶೀಲಿಸಿ ಆರೋಪಿ ವಿರುದ್ಧ ಸಾಕ್ಷ್ಯಗಳು ದೊರೆತಿದ್ದರಿಂದ ಅಂತಿಮ ವರದಿ ಸಲ್ಲಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಸದರಿ ಸಾಕ್ಷಿಯನ್ನು ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿರುತ್ತಾರೆ.

16. ಅಭಿಯೋಜನೆಯು ಆರೋಪಿತರ ವಿರುದ್ಧ ಮಾಡಲಾದ ಆರೋಪಣೆಗಳನ್ನು ಸಾಬೀತುಪಡಿಸಲು ಫ್ರಾಸಾ-1 ರಿಂದ 5 ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿಕೊಂಡು 03 ದಾಖಲೆಗಳನ್ನು ನಿಶಾನೆ ಒಳಪಡಿಸಲಾಗಿದೆ. ಅಭಿಯೋಜನೆಯ ಪ್ರಕಾರ ದಿನಾಂಕ 18.06.2020 ರಂದು ಬೆಳಿಗ್ಗೆ 07.30 ಗಂಟೆ ಸುಮಾರಿಗೆ ಸಾಕ್ಷಿ ನಂ-4 ರವರು ಕಸವನ್ನು ತಿಪ್ಪೆಗೆ ಹಾಕಿ ಬರುವಾಗ 2 ನೇ ಆರೋಪಿತರು ಸಾಕ್ಷಿ ನಂ-4 ರವರಿಗೆ ಮನೆಯ ಮುಂದೆ ಬರುತ್ತಿರುವಾಗ 2 ನೇ ಆರೋಪಿತಳು ಸಾಕ್ಷಿ-4 ರವರಿಗೆ ಅವಾಚ್ಯ ಶಬ್ದಗಳಾದ ಸೂಳೆ ಮಕ್ಕಳು ಮದುವೆ ಮುಂಜೆ ಇರಲಾರದೆ ಕುಂತಿದ್ದಾರೆ ಅಂತಾ ಬೈಯುತ್ತಿರುವಾಗ ಸಾಕ್ಷಿ-4 ರವರು ಯಾಕೆ ಈ ರೀತಿ ಬೈಯುತ್ತಿಯಾ ಅಂತಾ 2 ನೇ ಆರೋಪಿತಳಿಗೆ ಕೇಳಿದ್ದಕ್ಕೆ 1 ನೇ ಆರೋಪಿತನು ಮನೆಯಿಂದ ಹೊರಗೆ ಬಂದು ಸಾಕ್ಷಿ-4 ರವರಿಗೆ ಏ ಬೋಗಬಾಡಿ ನಿನ್ನ ಮಕ್ಕಳಿಗೆ ಬುದ್ಧಿ ಕಲಿಸು ನಮಗೆ ಏನು ಕೇಳುತ್ತೀ ಎಂದು ಗದರಿಸಿದಾಗ 3 ರಿಂದ 10 ನೇ ಆರೋಪಿತರು ಗುಂಪಾಗಿ ಬಂದು ಅವರೆಲ್ಲರೂ ಸಾಕ್ಷಿ-4 ರವರ ಜೊತೆ ಒರಟಾಗಿ ಮಾತಾನಾಡುತ್ತಿರುವಾಗ ಸಾಕ್ಷಿ-1 ರವರು ಓಡಿ ಅಲ್ಲಿಗೆ ಬಂದಿದ್ದು ಆರೋಪಿತರೆಲ್ಲರೂ ಗುಂಪಾಗಿ ನಿಂತಾಗ ಅದರಲ್ಲಿ 1 ನೇ ಆರೋಪಿತನು ಸಾಕ್ಷಿ-4 ರವರಿಗೆ ಎದೆಗೆ ಕೈಯಿಂದ ನೂಕಿದಾಗ ಸಾಕ್ಷಿ-1 ರವರು ಸಾಕ್ಷಿ-4 ರವರನ್ನು ಹಿಡಿದುಕೊಂಡು, ದೊಡ್ಡವರಿಗೆ ಮರ್ಯಾದೆ ಕೊಡಿ ಎಂದು ಹೇಳಿದಕ್ಕೆ, 1 ನೇ ಆರೋಪಿತನು ನಿಂದೆ ಏನಲೇ ಸೂಳೆ ಎಂದು ಸಾಕ್ಷಿ-1 ರವರ ಸೆರಗನ್ನು ಹಿಡಿದು

ಅಪಮಾನಗೊಳಿಸಿ ಆಕೆಯನ್ನು ನೂಕಿದಾಗ ಆಕೆಯು ಕೆಳಗಡೆ ಬಿದ್ದಾಗ 5 ನೇ ಆರೋಪಿತನು ಕಾಲಿನಿಂದ ಒದ್ದಿದ್ದು, ಆಗ ಉಳಿದ ಆರೋಪಿತರೆಲ್ಲರೂ ಸಾಕ್ಷಿ-1 ಮತ್ತು 4 ರವರಿಗೆ ಅವಾಚ್ಯವಾಗಿ ಬೈದಿದ್ದು, 3 ಮತ್ತು 7 ನೇ ಆರೋಪಿತರು ಕೂಡಿ ಕೈಯಿಂದ ಹೊಡೆದಿದ್ದು, ಸಾಕ್ಷಿ-1 ಮತ್ತು 4 ರವರು ಅಂಜಿಕೊಂಡು ಭಯದಿಂದ ಮನೆಗೆ ಬರುತ್ತಿದ್ದಾಗ 4, 8 ರಿಂದ 10 ನೇ ಆರೋಪಿತರು ಅವರಿಗೆ ಎಲ್ಲರೂ ಸೇರಿ ಇನ್ನೊಂದು ಸಲ ನಮ್ಮ ತಂಟೆಗೆ ಬಂದರೆ ಜೀವವನ್ನು ತೆಗೆಯುತ್ತೇವೆ ಅಂತಾ ಜೀವದ ಬೆದರಿಕೆ ಹಾಕಿದ್ದು ಅಲ್ಲದೆ 1 ನೇ ಆರೋಪಿತನು ನಾನು ಲೀಡರ್ ಇದ್ದೇನೆ ನನ್ನ ಹಿಂದೆ ಲೀಡರ್ ಇದ್ದಾರೆ ನೀನೇನು ಕಿತ್ತಿಕೊಳ್ಳುತ್ತಿ ಅಂತಾ ಸಾಕ್ಷಿ-1 ನೇದ್ದವರಿಗೆ ಬೈದಿರುತ್ತಾರೆ ಎಂಬ ಪ್ರಕರಣಕ್ಕೆ ಸಂಬಂಧಿಸಿದಂತೆ ಅಭಿಯೋಜನೆಯು ಆರು ಜನ ಸಾಕ್ಷಿದಾರರಲ್ಲಿ ಐದು ಜನ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿಕೊಂಡಿದ್ದು ಸದರಿಯವರಲ್ಲಿ ದೂರು ನೀಡಿದ ಸಾಕ್ಷಿದಾರರು ಪ್ರತ್ಯಕ್ಷಸಾಕ್ಷಿದಾರರಾಗಿದ್ದು ಸ.ಸ.ಅ ರವರು ಭಾಗಶಃ ಪ್ರತಿಕೂಲ ಎಂದು ಪಾಟೀ ಸವಾಲಿಗೆ ಒಳಪಡಿಸಿದಾಗ ಅಭಿಯೋಜನೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಚಾಸಾ-4 ರವರು ಗಾಯಾಳು ಸಾಕ್ಷಿಯಾಗಿದ್ದು ಸದರಿಯವರು ಜಗಳ ರಾತ್ರಿ 08.00 ಗಂಟೆಗೆ ಆಗಿದ್ದು ಆಗ ಕತ್ತಲು ಇತ್ತು ಎಂದು ನುಡಿಯುತ್ತಾರೆ ಆದರೆ ಅಭಿಯೋಜನೆ ಪ್ರಕಾರ ಘಟನೆ ಬೆಳಗ್ಗೆ 07.30 ರ ಸುಮಾರಿಗೆ ಆಗಿರುತ್ತದೆ. ಚಾಸಾ-4 ರವರು ತಮ್ಮ ಮುಖ್ಯವಿಚಾರಣೆಯಲ್ಲಿ 1 ನೇ ಆರೋಪಿ ನನ್ನ ಕೂದಲು ಹಿಡಿದು ಎಳೆದಾಡಿ ಸೆರಗು ಹಿಡಿದು ಎಳೆದಾಡಿ ನನ್ನ ಎದೆಗೆ ಕಾಲಿನಿಂದ ಒದ್ದಿರುತ್ತಾನೆ ಎಂದು ಸಾಕ್ಷ್ಯ ನುಡಿದರೆ ದೂರಿನಲ್ಲಿ 1 ನೇ ಆರೋಪಿ ನಮ್ಮ ಅತ್ತೆಯ ಎದೆಗೆ ಕೈಯಿಂದ ನೂಕಿರುತ್ತಾನೆ ಆಗ ನಾನು ಅತ್ತೆಯನ್ನು ಹಿಡಿದುಕೊಂಡೆ ಎಂದು ದೂರಿನಲ್ಲಿ ನಮೂದಿಸಿರುವುದು ಒಂದಕ್ಕೊಂದು ವ್ಯತಿರಿಕ್ತವಾಗಿರುತ್ತವೆ. ಪಂಚಸಾಕ್ಷಿದಾರರು ಅಭಿಯೋಜನೆಗೆ ವ್ಯತಿರಿಕ್ತ ಸಾಕ್ಷ್ಯ ನುಡಿದಿದ್ದು ಇರುತ್ತದೆ. ಆರೋಪಿತರ ಮತ್ತು ಚಾಸಾ-1 ರವರ ನಡುವೆ ವೈಮನಸ್ಸು ಇರುವುದು ಕಂಡುಬಂದಿರುತ್ತದೆ. ಒಟ್ಟಾರೆಯಾಗಿ ಅಭಿಯೋಜನೆಯು ಆರೋಪಿತರ ವಿರುದ್ಧ ಮಾಡಲಾದ ಆರೋಪಣೆಗಳನ್ನು ರುಜುವಾತು ಪಡಿಸುವಲ್ಲಿ ಸ್ಪಷ್ಟ ಮತ್ತು ನಿಸ್ಸಂದೇಹವಾದ ಸಾಕ್ಷ್ಯ ನೀಡುವಲ್ಲಿ ಅಭಿಯೋಜನೆ ವಿಫಲವಾಗಿರುತ್ತದೆ. ಆದ್ದರಿಂದ ಒಟ್ಟಾರೆಯಾಗಿ ಪ್ರಕರಣದಲ್ಲಿನ

ಸಾಕ್ಷ್ಯವನ್ನು ಪರಿಶೀಲಿಸಲಾಗಿ ಅಭಿಯೋಜನೆಯು ಅಂಶ–1 ನ್ನು ರುಜುವಾತು ಪಡಿಸುವಲ್ಲಿ ವಿಫಲವಾಗಿರುತ್ತದೆ. ಆದ್ದರಿಂದ, ಅಂಶ 1 ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

17. **ಅಂಶ 2 ನ್ನು :** ಅಂಶ 1 ರ ಈ ಮೇಲಿನ ಕಾರಣಗಳಿಗಾಗಿ, ಈ ಕೆಳಕಂಡಂತೆ;

**ಃ ಆದೇಶ ಃ**

ದಂಡ ಪ್ರಕ್ರಿಯಾ ಸಂಹಿತೆ ಕಲಂ.248(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ ಆರೋಪಿತರನ್ನು ಭಾರತೀಯ ದಂಡ ಸಂಹಿತೆ ಕಲಂ.143, 147, 323, 354(ಬಿ), 504 ಮತ್ತು 506 ಸಹ ಕಲಂ.149 ರಡಿಯಲ್ಲಿನ ದೋಷಾರೋಪಣೆಯಿಂದ ಮುಕ್ತಗೊಳಿಸಿ ಈ ಮೂಲಕ ಬಿಡುಗಡೆ ಮಾಡಲಾಗಿದೆ.

ಆರೋಪಿತರು ಮತ್ತು ಅವರ ಜಾಮೀನುದಾರರು ಬರೆದುಕೊಟ್ಟಿರುವ ಜಾಮೀನು ಮತ್ತು ಭದ್ರತಾ ಮುಚ್ಚಳಿಕೆಗಳನ್ನು ಈ ಮೂಲಕ ರದ್ದುಗೊಳಿಸಲಾಗಿದೆ.

(ಶಿಘ್ರಲಿಪಿಗಾರರಿಗೆ ನೇರವಾಗಿ ಗಣಕ ಯಂತ್ರದ ಮೂಲಕ ಉಕ್ತ ಲೇಖನ ನೀಡಿ ಬೆರಳಚ್ಚು ಪಡಿಸಿದ ನಂತರ ಅದನ್ನು ಪರಿಶೀಲಿಸಿ ತಿದ್ದುಪಡೆಗಳನ್ನು ಮಾಡಿದ ನಂತರ ತೀರ್ಪನ್ನು ತೆರೆದ ನ್ಯಾಯಾಲಯದಲ್ಲಿ ದಿನಾಂಕ 9 ನೇ ಏಪ್ರೀಲ್ 2026 ರಂದು ಘೋಷಿಸಲಾಯಿತು).

(ಸುರೇಶ ಅಣ್ಣಪ್ಪ ಸವದಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ದೇವದುರ್ಗ.

# ಅನುಬಂಧ

## ಸಾಕ್ಷಾಧಾರಗಳ ಪಟ್ಟಿ

### ಅಭಿಯೋಜನೆಯ ಪರ ಸಾಕ್ಷಿಗಳು

| ಶ್ರೇಣಿ | ಹೆಸರುಗಳು | ಸಾಕ್ಷ್ಯದ ಸ್ವರೂಪ |
|---|---|---|
| ಪ್ರಾಸಾ-1 | ಸಾಧಿಕ್ ಪಾಷ ತಂದೆ ಶೇಖ್ ಮಹೆಬೂಬಸಾಬ | ತನಿಖಾಧಿಕಾರಿಗಳು |
| ಪ್ರಾಸಾ-2 | ಸೂಗಮ್ಮ ಗಂಡ ಮಲ್ಲಯ್ಯ | ದೂರುದಾರರು |
| ಪ್ರಾಸಾ-3 | ಲಕ್ಷ್ಮೀ ಗಂಡ ಶರಣಪ್ಪ | ಸಾಕ್ಷಿದಾರರು |
| ಪ್ರಾಸಾ-4 | ಭೀಮಪ್ಪ ತಂದೆ ನಾಗಪ್ಪ | ಗುನ್ಹೆಸ್ಥಳದ ಪಂಚಸಾಕ್ಷಿ |
| ಪ್ರಾಸಾ-5 | ಎಮ್.ಈರಣ್ಣ ತಂದೆ ಮಾರೆಪ್ಪ | ತನಿಖಾಧಿಕಾರಿಗಳು |

### ಆರೋಪಿಗಳ ಪರ ಸಾಕ್ಷಿಗಳು

| ಶ್ರೇಣಿ | ಹೆಸರುಗಳು | ಸಾಕ್ಷ್ಯದ ಸ್ವರೂಪ |
|---|---|---|
| | ಇಲ್ಲ | |

## ದಾಖಲಾತಿಗಳು

### ಅಭಿಯೋಜನೆಯ ಪರ ದಾಖಲಾತಿಗಳು

| ಸಂಖ್ಯೆ | ದಾಖಲಾತಿ ಸಂಖ್ಯೆ | ವಿವರಣೆ |
|---|---|---|
| 1. | ನಿಪಿ-1 | ದೂರು |
| 2. | ನಿಪಿ-2 | ಪ್ರಥಮ ವರ್ತಮಾನ ವರದಿ |
| 3. | ನಿಪಿ-3 | ಗುನ್ಹೆ ಸ್ಥಳದ ಪಂಚನಾಮೆ |

**ಆರೋಪಿತರ ಪರ ದಾಖಲಾತಿಗಳು**

| ಸಂಖ್ಯೆ | ದಾಖಲಾತಿ ಸಂಖ್ಯೆ | ವಿವರಣೆ |
|---|---|---|
| ಇಲ್ಲ | | |

**ಮುದ್ದೆಮಾಲುಗಳ ಪಟ್ಟಿ**

| ಸಂಖ್ಯೆ | ಮುದ್ದೆಮಾಲಿನ ಸಂಖ್ಯೆ | ವಿವರಣೆ |
|---|---|---|
| ಇಲ್ಲ | | |

(ಸುರೇಶ ಅಣ್ಣಪ್ಪ ಸವದಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ದೇವದುರ್ಗ.

Digitally signed by SURESH ANNAPPA SAVADI
Location: Senior Civil Judge and JMFC, Devadurga